ಮೇಲೆ ಒತ್ತರಿಸಿ ಕೂರಿಸಿ, ಬಲಗೈಯನ್ನು ತನ್ನ ಬಾಯಿಯ ಬಳಿ ತಂದು, ತೋರು ಬೆರಳನ್ನು ತನ್ನ ತುಟಿಗಳಮೇಲೆ ತಂದು, ''ಚುಪ್'' ಎಂದಳು. ಕ್ರೌರ್ಯದ ಮೊಟ್ಟ ಮೊದಲ ಪರಿಚಯವಾದದ್ದು ಹೀಗೆ.

ಕೆಂಪಾದ ಕಣ್ಣುಗಳನ್ನು ಅಗಲವಾಗಿ ಬೀರುತ್ತಾ ಕೋಪ, ವಿಷಾದ, ದ್ವೇಷ, ಭರ್ತ್ಸನೆಯಿಂದ ಕೂಡಿದ ಆಕೆಯ ನೋಟ ನನ್ನಲ್ಲಿ ಸ್ಥಿರವಾಗಿ ಬಿಟ್ಟಿತು. ಮತ್ತೆ ನಾನು ಯಾವತ್ತೂ ಅಳಲಿಲ್ಲ; ಸುರಯ್ಯ ಆಂಟಿ ಸತ್ತಾಗಲೂ! ಸುರಯ್ಯ ಆಂಟಿ ಹಾಗೆ ನನ್ನ ಮನಸ್ಸಿನಲ್ಲಿ ಒತ್ತರಿಸಿ ನಿಂತುಬಿಟ್ಟರು – ದಟ್ಟ ಅರಣ್ಯವಾಗಿ. ಆಗಾಗ ಹಾಯೆನಿಸುವ ತಂಪು ಗಾಳಿಯನ್ನು ಬೀರುತ್ತಿದ್ದರು. ಆಕೆಯ ನೆನಪು ನನ್ನ ನರನಾಡಿಗಳಲ್ಲಿ ಅಪಾರ ಚೈತನ್ಯವನ್ನು ಬೀರಿದ್ದು ನಾನು ಆಕೆಯನ್ನು ನಿನ್ನ ತಾಯಿಯೆಂದು ಯಾವತ್ತಿಗೂ ನೆನಪಿಸಿಕೊಳ್ಳಲಿಲ್ಲ. ನನ್ನ ಸುರಯ್ಯ ಆಂಟಿ ಎಂಬ ಅತ್ಯಂತ ಪ್ರೀತಿ ಪಾತ್ರ ಜೀವವೊಂದು ನನ್ನಲ್ಲಿ ಬೇರುಬಿಟ್ಟು ಪಲ್ಲವಿಸತೊಡಗಿತು. ನನ್ನೊಡನೆ ಮಾತನಾಡತೊಡಗಿತು; ನನ್ನ ಕಂಬನಿಯನ್ನು ತೊಡೆಯತೊಡಗಿತು. ಆಕೆ ಆ ಮಾತೃತ್ವದ ಛಾಯೆಯನ್ನು ನನ್ನಲ್ಲಿ ಬಿತ್ತಿ ಬೆಳೆಸತೊಡಗಿದ್ದರಿಂದ ನನ್ನ ಮನೋಧರ್ಮವೇ ಬದಲಾಗಿ ಹೋಯಿತು. ನಿನ್ನನ್ನು ನಾನು ಯಾವತ್ತೂ ನಿರ್ಣಾಯಕವಾಗಿ ಮೌಲ್ಯಮಾಪನ ಮಾಡಲಿಲ್ಲ. ನಿನ್ನನ್ನು ತುಚ್ಛ ಹೆಸರುಗಳಿಂದ ಕರೆಯಲಿಲ್ಲ. ನನಗೆ ಮೋಸ ಮಾಡಿದೆ ಎಂಬ ದೂಷಣೆಯ ಭಾವ ನನ್ನಲ್ಲಿ ಮೂಡಲಿಲ್ಲ. ನೀನು ಏನು ಬೇಕೋ ಅದನ್ನು ಮಾಡಿಕೊಂಡೆ. ನಿನ್ನ ಬದುಕಿನ ಆಯ್ಕೆ ನಿನಗೆ ಮಹತ್ವದ್ದು ಎನಿಸಿತು.

ವಸುಮತಿ ಎಂಬ ಹುಡುಗಿ ನಿನ್ನ ಬಾಳ ಬೆಳಕಾದಳು. ನಿನ್ನೊಡನೆ ಬಾಳನ್ನು ಹಂಚಿಕೊಂಡು ದಾಪುಗಾಲಿಕ್ಕಿದಳು. ಸುರಯ್ಯ ಆಂಟಿಯ ಸಾವಿನ ಆ ಸಂದರ್ಭದಲ್ಲಿ ಬಹುಶಃ ನೀನು ಅವಳ ಎದೆಯಲ್ಲಿ ನಿನ್ನ ಮೋರೆಯನ್ನಿಟ್ಟು ಕಂಬನಿ ಹರಿಸಿರಬಹುದು. ಅವಳು ಮಗುವಿನಂತೆ ನಿನ್ನನ್ನು ಎದೆಗವಚಿ ಸಂತೈಸಿರಬಹುದು. ಸುರಯ್ಯ ಆಂಟಿಯ ಸಾವನ್ನೂ ನೀನು ಅವಳಿಗೆ ಸಮೀಪವಾಗಲು, ಅವಳಿಂದ ಸಾಂತ್ವನ ಪಡೆಯಲು, ಅವಳ ಮಡಿಲಿನ ಮಗುವಾಗಲು ಮತ್ತು ಆಕೆಗಾಗಿ ನಿನ್ನ ತಾಯಿಯನ್ನು ಕಳೆದುಕೊಂಡೆ ಎಂಬ ಅಪರಾಧಿ ಭಾವವನ್ನು ಅವಳಲ್ಲಿ ಸೃಷ್ಟಿಸಲು ನೀನು ಸಫಲವಾಗಿರಬಹುದು. ಹೆಣವಾಗಿ ಹೋದ ತಾಯಿಗೆ ನೀನು ಹೆಗಲನ್ನು ಕೂಡ ನೀಡಲಾಗಲಿಲ್ಲ ಎಂಬ ಕನಿಷ್ಠ ಪ್ರಜ್ಞೆ ನಿನ್ನಲ್ಲಿ ಮೂಡಿತೋ ಇಲ್ಲವೋ ನನಗೆ ತಿಳಿಯಲಿಲ್ಲ.

ಸಾವಿನ ಸಮ್ಮುಖದಲ್ಲಿಯೂ ಆಕೆ ನಿನ್ನನ್ನು ನೆನಪಿಸಲಿಲ್ಲವಂತೆ. ಹಾಗೆಂದು ಜನ ಹೇಳುತ್ತಾರಪ್ಪ... ಆದರೆ, ಆಕೆಯ ಪ್ರತಿ ರಕ್ತದ ಕಣದಲ್ಲಿಯೂ ನೀನು ವ್ಯಾಪಿಸಿದ್ದೆ ಎಂಬ ಸತ್ಯ ನನ್ನಷ್ಟೇ ನಿನಗೂ ಗೊತ್ತಿದೆ. ಆಗಲೂ ನಿನ್ನ ಘನತೆಯನ್ನು ಕಾದಿರಿಸಿ ತಾನು ಮಾತ್ರ ಚೂರು ಚೂರಾಗಿ ಸಿಡಿದುಹೋದಳು. ಅಂತಿಮವಾಗಿ ತನ್ನ ಕೊನೆಯ ಉಸಿರಿಗಾಗಿ ಚಡಪಡಿಸುತ್ತಿರುವಾಗಲೂ ಆಕೆ ನನ್ನ ಹೆಸರನ್ನು ಪದೇಪದೇ ಉಚ್ಚರಿಸುತ್ತಿದ್ದಳಂತೆ. ಸುತ್ತ ಮುತ್ತಲಿನ ಜನ ಅಲ್ಲಾಹನ ಹೆಸರನ್ನು ಹೇಳುವಂತೆ ಅವಳಿಗೆ ಎಚ್ಚರಿಸಿದರೂ ಆಕೆ ನಡುವೆ ನನ್ನ ಹೆಸರನ್ನು ಹೇಳುವುದನ್ನು ಬಿಡಲಿಲ್ಲ ಎಂದು ಅಮ್ಮಿಯ ತಂಗಿ ರಾಹತ್ ಚಿಕ್ಕಮ್ಮ ಏಕಾಂತದಲ್ಲಿ ನನ್ನೊಡನೆ ಮಾತನಾಡಿ ಎಷ್ಟು ಅತ್ತಳೆಂದರೆ ನಾನು ಯಾವುದೇ ಪ್ರತಿಸ್ಪಂದನೆಯನ್ನು ನೀಡದೆ ಕಲ್ಲಾಗಿದ್ದೆ. ಕೊನೆಗೆ ಆಕೆ ಹೇಳಿದಳು, 'ಸಾಯುವಾಗ ನಿನ್ನ ಹೆಸರು ಆಕೆಯ ಬಾಯಲ್ಲಿ ಆಡಬಾರದಾಗಿತ್ತು. ನಿನಗೆ ಯಾವಾಗ ಟೈಮ್ ಸಿಗುತ್ತೋ ಆವಾಗ ಕುರಾನಿನ ಕೆಲ ಭಾಗವನ್ನು ಪಠಿಸಿ ಆಕೆಗಾಗಿ ಪ್ರಾರ್ಥನೆ ಮಾಡು.' ಎಂದು ನನಗೆ ಸೂಚನೆ ಕೊಡುವಾಗಲೂ ಅವಳ ಅಳು ನಿಂತಿರಲಿಲ್ಲ.

ಅಲ್ಲಿಯೂ ನಿನಗೆ ಅಪಾರ ಲಾಭವಿತ್ತು. ನಿನ್ನ ಮನೆಯ ಮತ್ತು ಮನೆತನದ ಹಾಗೂ ಸುರಯ್ಯ ಆಂಟಿಯ ಅಕಾಲಿಕ ಸಾವು ಎಲ್ಲರ ಬಾಯಲ್ಲಿ ಚರ್ಚೆಗೊಳಗಾಯಿತು. ನೀನು ಮುಸ್ಲಿಂ